**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

ಮಣಿಪಾಲ್ ಟೆಕ್ನಾಲಜೀಸ್ ಸಂಸ್ಥೆಯು ಕಾನೂನು ಬಾಹಿರವಾಗಿ ಅಕ್ರಮವೆಸಗಿ ಉನ್ನತ ಮಟ್ಟದ ಸಾರಿಗೆ ಅಧಿಕಾರಿಗಳೊಂದಿಗೆ ಷಾಮೀಲಾಗಿ ತಮ್ಮ ಮೇಲಿರುವ ಎಫ್.ಐ.ಆರ್. ಕ್ರಿಮಿನಲ್ ಮೊಕದ್ದಮೆಗಳು, ಚಾರ್ಜ್ ಶೀಟ್‌ಗಳನ್ನು ಮರೆಮಾಚಿ, ಹಲವಾರು ಟೆಂಡರ್‌ಗಳನ್ನು ಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಯ ಹೆಸರಿನಲ್ಲಿ ಸಾರಿಗೆ ಇಲಾಖೆಯಿಂದ ಪಡೆದು, ಇಲಾಖೆಗೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವ ಸಾರ್ವಜನಿಕ ಹಿತಾಸಕ್ತಿಯ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸಿ ಅದರ ಉಸ್ತುವಾರಿಯನ್ನು ನಿರ್ವಹಿಸಲು ಸರ್ಕಾರಿ ಸ್ವಾಮ್ಯದ ಮೆ// ಕಿಯೋನಿಕ್ಸ್ ಸಂಸ್ಥೆಯೊಂದಿಗೆ ದಿನಾಂಕ:20-05-2010 ರಂದು ಆರು (6) ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡು ಜಾರಿಗೊಳಿಸಿದ್ದು, ಸದರಿ ಯೋಜನೆಯ ಒಪ್ಪಂದದ ಅವಧಿಯು ದಿನಾಂಕ:19-05-2016 ರಂದು ಮುಕ್ತಾಯಗೊಂಡಿದ್ದು, ತದನಂತರ, ದಿನಾಂಕ:29-03-2016 ರಲ್ಲಿ ಮೆ// ಕಿಯೋನಿಕ್ಸ್ ಸಂಸ್ಥೆಯವರು ಸಲ್ಲಿಸಿದ ಕೋರಿಕೆಯ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯ ಅಧಿಸೂಚನೆ ಸಂ: ಆಇ 481 ವೆಚ್ಚ-12/16, ದಿನಾಂಕ:01-07-2016 ರಲ್ಲಿ ಸದರಿ ನೆಟ್‌ವರ್ಕಿಂಗ್ ಉಸ್ತುವಾರಿ ಒಪ್ಪಂದವನ್ನು ಮೆ// ಕಿಯೋನಿಕ್ಸ್ ಸಂಸ್ಥೆಗೆ ದಿನಾಂಕ:20-05-2016 ರಿಂದ 3 ತಿಂಗಳ ಅವಧಿಗೆ ನೇರವಾಗಿ ವಹಿಸಲು ಕೆ.ಟಿ.ಟಿ.ಪಿ ಅಧಿನಿಯಮ, 1999ರ ಕಲಂ 4(ಜ)ರಡಿ ವಿನಾಯಿತಿ ನೀಡಲಾಗಿರುತ್ತದೆ.

ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಯನ್ನು ಮುಂದುವರೆಸುವ ಸಲುವಾಗಿ, ಹೊಸದಾಗಿ ಟೆಂಡರ್ ಅನ್ನು ದಿನಾಂಕ:09-10-2018 ರಂದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆಹ್ವಾನಿಸಿದ್ದು, ಕಾರಣಾಂತರಗಳಿಂದ ಟೆಂಡರ್ ಅನ್ನು ರದ್ದುಗೊಳಿಸಲಾಗಿತ್ತು. ಸದರಿ ನೆಟ್‌ವರ್ಕಿಂಗ್ ಯೋಜನೆಗೆ ಸೇವಾದಾರರನ್ನು ಆಯ್ಕೆ ಮಾಡಲು ಪರಿಷ್ಕೃತ ಟೆಂಡರ್ ದಾಖಲೆಗಳನ್ನು ಸಿದ್ದಪಡಿಸಿ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ:06-03-2019 ರಂದು ಪುನಃ ಟೆಂಡರ್ ಕರೆಯಲಾಯಿತು. ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್ಡುದಾರರನ್ನು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಪರಿಶೀಲನೆ ನಡೆಸಿ ಎಲ್1 ಮತ್ತು ಎಲ್2 ಬಿಡ್ಡುದಾರರನ್ನು ಅಂತಿಮಗೊಳಿಸಲಾಗಿತ್ತು. ಎಲ್1 ಬಿಡ್ಡುದಾರರಾದ ಮೆ// ಮಣಿಪಾಲ್ ಟೆಕ್ನಾಲಜೀಸ್ ರವರು ತಮ್ಮ ಘೋಷಣಾ ಪತ್ರಗಳಲ್ಲಿ ಹಲವು ಮಾಹಿತಿಗಳನ್ನು ಬಹಿರಂಗಪಡಿಸಿಲ್ಲವಾದ್ದರಿಂದ ಮತ್ತು ಟೆಂಡರ್ ನಿಬಂಧನೆಗಳ ಉಲ್ಲಂಘನೆಗಾಗಿ ಸರ್ಕಾರದ ಪತ್ರ ಸಂ.: ಟಿಡಿ 85 ಟಿಡಿಓ 2019, ಬೆಂಗಳೂರು, ದಿನಾಂಕ:19-02-2021ರ ಪತ್ರದನ್ವಯ ಸದರಿ ಟೆಂಡರ್ ಅನ್ನು ರದ್ದುಗೊಳಿಸಲಾಗಿರುತ್ತದೆ. ಸರ್ಕಾರದ ಪತ್ರ ಸಂ.: ಟಿಡಿ 85 ಟಿಡಿಓ 2019, ಬೆಂಗಳೂರು, ದಿನಾಂಕ:19-02-2021 ರನ್ವಯ ಸದರಿ ಟೆಂಡರ್ ಅನ್ನು ರದ್ದುಗೊಳಿಸಿರುವ ವಿಷಯವನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಅರ್ಜಿಗಳ ಸಮಿತಿ ರವರ ಆದ್ಯ ಗಮನಕ್ಕೆ ತರಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಟಿಡಿ 85 ಟಿಡಿಓ 2019, ಬೆಂಗಳೂರು, ದಿನಾಂಕ:11-08-2021 ರ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಗೆ ಸೇವಾದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999ರ ಕಲಂ-09, 10ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯದಲ್ಲಿರುವ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಯನ್ನು ಜಾರಿಗೆ ತರುವ ಸಂಬಂಧ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ಮತ್ತು ಟೆಂಡರ್ ಅಂಗೀಕರಿಸುವ ಸಮಿತಿಯನ್ನು ರಚಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಯೋಜನೆಗೆ ಸೇವಾದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999ರ ಉಪಬಂಧಗಳ ಪ್ರಕಾರ ಟೆಂಡರ್ ಅನ್ನು ವಿದ್ಯುನ್ಮಾನ ಸಂಗ್ರಹಣಾ ಚೌಕಟ್ಟು (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್) ಮುಖಾಂತರ ಟೆಂಡರ್ ಅನ್ನು ದಿನಾಂಕ:18-09-2021 ರಂದು ಆಹ್ವಾನಿಸಲಾಗಿರುತ್ತದೆ.

ದಿನಾಂಕ:25-10-2021 ರಂದು ಟೆಂಡರಿಗೆ ಸಂಬಂಧಿಸಿದಂತೆ ನಡೆದ Technical Evaluation ಸಭೆಯಲ್ಲಿ ಸಮಿತಿಯವರು ತೆಗೆದುಕೊಂಡ ನಿರ್ಣಯದಂತೆ, ಟೆಂಡರಿಗೆ ಅರ್ಜಿ ಸಲ್ಲಿಸಿದ ಇಬ್ಬರು ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ.ಲಿ. ಮತ್ತು ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು ಟೆಕ್ನಿಕಲ್ ತಾಂತ್ರಿಕ ಅರ್ಹತೆಯನ್ನು ಪಡೆದಿರುತ್ತಾರೆ.

ದಿನಾಂಕ:19-11-2021 ರಂದು Technical Evaluation ರಲ್ಲಿ ಅರ್ಹತೆ ಪಡೆದ ಇಬ್ಬರು ಬಿಡ್ಡುದಾರರು ಪರಿಕಲ್ಪನೆಯ ಪುರಾವೆಯನ್ನು(Proof of Concept) ಪಿಪಿಟಿ(PPT)ಯೊಂದಿಗೆ ಮತ್ತು ಪರಿಕಲ್ಪನೆಯ ಪುರಾವೆಯ (Proof of Concept) ಸಂಬಂಧ ನೇರ ಪ್ರದರ್ಶನವನ್ನು (Live Demonstration) ವಾಯುಮಾಲಿನ್ಯ ತಪಾಸಣಾ ಕೇಂದ್ರದಲ್ಲಿ ಸಮಿತಿಯ ಮುಂದೆ ಪ್ರಸ್ತುತಪಡಿಸಿರುತ್ತಾರೆ.

ದಿನಾಂಕ:01-12-2021 ರಂದು ತಾಂತ್ರಿಕ ಮೌಲ್ಯಮಾಪನ ಮತ್ತು ಅರ್ಹ ಬಿಡ್ಡುದಾರರಿಂದ ಪರಿಕಲ್ಪನೆಯ ಪುರಾವೆಯಲ್ಲಿ (Proof of Concept) ಅರ್ಹತೆ ಪಡೆದ ಬಿಡ್ಡುದಾರರು ಸಲ್ಲಿಸಿರುವ ಹಣಕಾಸಿನ ಪ್ರಸ್ತಾವನ್ನು ಅಂತಿಮಗೊಳಿಸುವ ಸಂಬಂಧ ಸಭೆ ನಡೆಸಿ

Techno Commercial Evaluation ಅಂಕಗಳನ್ನು ಲೆಕ್ಕಾಚಾರ ಮಾಡಿದ ನಂತರ ಸಮಿತಿಯು ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ಮಣಿಪಾಲ ರವರು ಅತಿ ಕಡಿಮೆ ದರ ನಮೂದು ಮಾಡಿರುವುದರಿಂದ ಎಲ್1 (L1) ಬಿಡ್ಡುದಾರರು ಎಂದು ಸಮಿತಿಯವರು ತೀರ್ಮಾನಿಸಿರುತ್ತಾರೆ.

ಸದರಿ ಕರೆಯಲಾದ ಟೆಂಡರಿನಲ್ಲಿ ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ರವರು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.., ರವರ ಅಂಗ ಸಂಸ್ಥೆಯಾಗಿರುವುದು ಕಂಡುಬರುತ್ತದೆ.

ದಿನಾಂಕ:02-12-2021 ರಂದು ಮಾನ್ಯ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರ ಅಂಗ ಸಂಸ್ಥೆಯಾಗಿರುವ ಕಾರಣ ಸದರಿಯವರಿಗೆ ಕಾರ್ಯಾದೇಶ ನೀಡುವ ಬಗ್ಗೆ ಕಾನೂನು ಅಭಿಪ್ರಾಯ ಪಡೆದು ಮುಂದುವರೆಯಲು ಸೂಚಿಸಿರುತ್ತಾರೆ.

ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು ಪತ್ರ AVL/NET/TC-4/KAR/009/2021-22 ದಿನಾಂಕ:08-12-2021ರ ಪತ್ರದಲ್ಲಿ ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು 2019ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಕರೆಯಲಾದ ಟೆಂಡರಿನಲ್ಲಿ ಎಲ್1 (L1) ಬಿಡ್ಡುದಾರರಾಗಿ ಆಯ್ಕೆಯಾದ ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ., ರವರು ಕ್ರಿಮಿನಲ್ ಹಿನ್ನಲೆಯನ್ನು ಹೊಂದಿರುವುದನ್ನು ಮರೆಮಾಚಿರುವುದರಿಂದ ಅನರ್ಹಗೊಂಡಿರುತ್ತಾರೆ ಮತ್ತು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ನ ಶೇಕಡ 80% ಷೇರನ್ನು ಹೊಂದಿರುತ್ತಾರೆಂದು ಹಾಗೂ ಅದರ ಅಂಗ ಸಂಸ್ಥೆಯಾಗಿರುತ್ತಾರೆಂದು ತಿಳಿಸಿರುತ್ತಾರೆ. ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ನವರು ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಯಾವುದೇ ಯೋಜನೆಯಲ್ಲಿ ಅನುಭವ ಹೊಂದಿರುವುದಿಲ್ಲ ವೆಂದು ತಿಳಿಸುತ್ತಾ, ಪ್ರಸ್ತುತ ಟೆಂಡರಿನಲ್ಲಿ ಭಾಗವಹಿಸಿರುವ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ರವರನ್ನು ಪರಿಗಣಿಸಬಾರದೆಂದು ಮನವಿ ಮಾಡಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಪ್ರಸ್ತುತ ಕರೆಯಲಾದ ಟೆಂಡರಿನಲ್ಲಿ ಎಲ್1 ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರಲ್ಲಿ ಶೇಕಡ 80% ಷೇರನ್ನು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಹೊಂದಿದ್ದು, ಅದರ ಅಂಗ ಸಂಸ್ಥೆಯಾಗಿರುತ್ತಾರೆ. ಕಾರಣ, ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರನ್ನು ಪರಿಗಣಿಸುವ ಬಗ್ಗೆ ಕಾನೂನು ಇಲಾಖಾ ಅಭಿಪ್ರಾಯ ಪಡೆದು ಪ್ರಸ್ತುತ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯ ಅಭಿಪ್ರಾಯದನ್ವಯ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು.

ಮೆ// ಮಣಿಪಾಲ್ ಟೆಕ್ನಾಲಜೀಸ್ ಸಂಸ್ಥೆಗೆ ಅಥವಾ ಅದರ ಅಂಗ ಸಂಸ್ಥೆಗೆ ಸಾರಿಗೆ ಇಲಾಖೆಯಿಂದ ಯಾವುದೇ ಟೆಂಡರನ್ನು ನೀಡಿರುವುದಿಲ್ಲ ಮತ್ತು ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ನಷ್ಟವಾಗಿರುವುದಿಲ್ಲ.

ಮುಂದುವರೆದು, ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆಯ ವತಿಯಿಂದ ಮೆ|| ಮಣಿಪಾಲ್ ಟೆಕ್ನಾಲಜೀಸ್ ರವರಿಗೆ ಸಂಸ್ಥೆ ವತಿಯಿಂದ ಯಾವುದೇ ಕಾರ್ಯಾದೇಶವನ್ನು ನೀಡಿರುವುದಿಲ್ಲ.

ಮುಂದುವರೆದು, "ನಿರ್ಭಯ" ಯೋಜನೆ ಅಡಿಯಲ್ಲಿ ಮಹಿಳಾ ಸುರಕ್ಷತೆಯ ವೈಶಿಷ್ಟತೆಯನ್ನು ಹೊಂದಿರುವ ಬೆಂಮಸಾಸಂಸ್ಥೆ ಮೊಬೈಲ್ ಆಪ್, ನಗರ ಸಾರಿಗೆ ಬಸ್‌ಗಳಲ್ಲಿ ಇನ್-ಬಸ್ ಕಣ್ಗಾವಲು ವ್ಯವಸ್ಥೆ, ಬಸ್ ನಿಲುಗಡೆ/ ನಿಲ್ದಾಣಗಳಲ್ಲಿ ಪ್ರಯಾಣಿಕರ ಮಾಹಿತಿ ವ್ಯವಸ್ಥೆ (ಪಿಐಎಸ್) ಪ್ರದರ್ಶಕಗಳನ್ನು ಒಳಗೊಂಡಿರುವ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ|| ಎಂಸಿಟಿ ಕಾರ್ಡ್ಸ ಅಂಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಮೆ|| ಎಂಸಿಟಿ ರವರು ಮಣಿಪಾಲ್ ಟೆಕ್ನಾಲಜೀಸ್‌ನ ಅಂಗ ಸಂಸ್ಥೆಯೆಂದು ಪರಿಗಣಿಸಿದರೂ ಸಹ, ಮೆ|| ಎಂಸಿಟಿ ರವರು ಸ್ವತಂತ್ರ ಕಾನೂನಾತ್ಮಕ ಸಂಸ್ಥೆಯಾಗಿದ್ದು, ಯೋಜನೆಯನ್ನು ಸದರಿಯವರು ನಿರ್ವಹಿಸಲು ಟೆಂಡರ್ ನಿಯಮಾವಳಿಗನ್ವಯ ಅರ್ಹರಾಗಿರುವ ಹಿನ್ನೆಲೆಯಲ್ಲಿ, ಮೆ|| ಎಂಸಿಟಿ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಟಿಡಿ 92 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 12/09/2022 12:23 PM

330 - 4